## ಕಳೆದ ಸಂಚಿಕೆಯಲ್ಲಿ...

ಸುಗಂಧಾಳನ್ನು 'ಇಟ್ಟುಕೊಂಡವಳು' ಎಂದು ರಿತಿಕ್ ಹೇಳಿದಾಗ ತುಂಬ ವೇದನೆಯಾಗುತ್ತದೆ. ಇದರಿಂದಲೇ ಸುಗಂಧಾ–ರಿತಿಕ್ ಬೇರೆ ಬೇರೆಯಾಗುತ್ತಾರೆ. ಸಂಬಂಧ ಹೇಗೆ ಬಿರುಕು ಬಿಡುತ್ತಾ ಹೋದವೋ ಎಂಬುದು ಸುಗಂಧಾಗೂ ಅರ್ಥವಾಗದು. ಈಗ ಸ್ವತಂತ್ರವಾಗಿ ಬದುಕಲು ನಿರ್ಧರಿಸುತ್ತಾಳೆ. ನಂತರ, ಅಮ್ಮನಿಗೆ ಹುಷಾರಿಲ್ಲ ಎಂದು ಕಚೇರಿಯಲ್ಲಿ ತಿಳಿಸಿ ತನ್ನ ಲಗೇಜುಗಳನ್ನು ತೆಗೆದುಕೊಂಡು ತಾನೇ ಕೀರ್ತಿಯಿಂದ ಖರೀದಿಸಿದ ಕಾರಿನಲ್ಲಿ ಭೂಪಾಲ್‌ಗೆ ಹೋಗುತ್ತಾಳೆ. ಹೋಗುವ ಮುನ್ನ ಉಮಾ ಭೇಟಿಯಾಗಿ ಇದ್ದಕ್ಕಿದ್ದ ಹಾಗೆ ಊರಿಗೆ ಹೋಗುವ ಬಗ್ಗೆ ವಿಚಾರಿಸುತ್ತಾರೆ. ಆಗ ಸುಗಂಧಾ ತಾನೇ ಕಥೆಯೊಂದನ್ನು ಹೆಣೆದು ಉಮಾ ಅವರನ್ನು ನಂಬಿಸುತ್ತಾಳೆ. ಕೀರ್ತಿಯನ್ನು ಹೋಟೆಲ್‌ಗೆ ಕರೆಸಿ ರಿತಿಕ್‌ನಿಂದ ಬೇರೆಯಾದ ವಿಚಾರ ತಿಳಿಸುತ್ತಾಳೆ ಸುಗಂಧಾ. ಭೂಪಾಲ್‌ಗೆ ಹೋಗಲು ಕಾರಿಗೆ ಡ್ರೈವರ್ ವ್ಯವಸ್ಥೆ ಮಾಡುತ್ತಾಳೆ ಕೀರ್ತಿ. ಭೂಪಾಲ್‌ಗೆ ತಲುಪಿ ಅಮ್ಮನ ಮನೆ ಸೇರಿ ರಿತಿಕ್ ಜೊತೆ ಸಂಬಂಧ ಕಳೆದುಕೊಂಡ ವಿಚಾರ ತಿಳಿಸುತ್ತಾಳೆ. 'ನಿನ್ನ ನಿರ್ಧಾರಕ್ಕೆ ನನ್ನ ಅಭ್ಯಂತರವಿಲ್ಲ' ಎನ್ನುತ್ತಾರೆ ಸುಗಂಧಾ ತಾಯಿ.



ನಾನು ರಿತಿಕ್‌ನ ಸೇಡನ್ನು ಇವನಲ್ಲಿ ತೀರಿಸಿಕೊಳ್ಳುತ್ತಿರುವೆನೇ? ಎಂದು ಆಗಾಗ ಯೋಚಿಸುತ್ತಿದ್ದೆ. ನಂತರ, ಇವರು ಇದಕ್ಕೂ ಯೋಗ್ಯರಲ್ಲವೆಂದು ಅನ್ನಿಸುತ್ತಿತ್ತು. ಇವರು ಮನರಂಜನೆಯ ಪಾತ್ರ ಮಾತ್ರ. ಇವರು ನನ್ನನ್ನು ಏನೆಂದು ತಿಳಿಯುತ್ತಿದ್ದರೋ, ನನಗೆ ತಿಳಿದಿಲ್ಲ. ತಿಳಿಯುವುದು ಮತ್ತು ಪ್ರದರ್ಶನ ಮಾಡುವುದರಲ್ಲಿ ತುಂಬಾ ವ್ಯತ್ಯಾಸವಿದೆ. ಒಮ್ಮೊಮ್ಮೆ ನನಗೆ ಋಷಭರ ಬಗ್ಗೆ ದಯೆ ಮೂಡುತ್ತಿತ್ತು; ಅವರು ನನ್ನನ್ನು ಅರ್ಥ ಮಾಡಿಕೊಳ್ಳದೆ ಇರುವಾಗ ಇದರಲ್ಲಿ ಅವರದೇನು ದೋಷ? ಅವರು ಜೀವನದ ವಿಭಿನ್ನ ಬಣ್ಣಗಳನ್ನು ಎಲ್ಲಿ ನೋಡಿದ್ದಾರೆ? ಅವರ ಪ್ರಕಾರ, ಅವರ ಹೆಂಡತಿ ಧಾರ್ಮಿಕ ಭಾವನೆಗಳಲ್ಲಿ ಮುಳುಗಿದ್ದಳು; ಅವಳ ಬೆಳಿಗ್ಗೆ ಮತ್ತು ಸಂಜೆಯ ಒಂದೊಂದು ಗಂಟೆ ಮಂದಿರದಲ್ಲಿಯೇ ಕಳೆದು ಹೋಗುತ್ತಿದ್ದವು. ಒಂದು ವೇಳೆ ಋಷಭ್ 'ಅಂಥಾಊ' (ಸೂರ್ಯ ಮುಳುಗುವ ಮೊದಲು ಜೈನರು ಮಾಡುವ ಊಟ) ಮಾಡಲಾಗದಿದ್ದರೆ, ಅವರಿಗೆ ರಾತ್ರಿಯ ಊಟ ಸಿಗುತ್ತಿರಲಿಲ್ಲ. 'ಅಂಥಾಊ' ಜೈನ ಸಮಾಜದಲ್ಲಿ ಪ್ರಚಲಿತವಾಗಿರುವ ನಿಯಮವಾಗಿದ್ದು, ಇದರಂತೆ ಸೂರ್ಯಾಸ್ತವಾಗುವುದಕ್ಕೆ ಮೊದಲು ಊಟ ಮಾಡಬೇಕು, ನಂತರ ರಾತ್ರಿಯ ಊಟ ಮಾಡಬಾರದು.

'ನಿಮ್ಮ ಹೆಂಡತಿಗೆ ನಿಮ್ಮ ಭಾವನೆಗಳನ್ನು ತಿಳಿಯಪಡಿಸಲು ಸಾಧ್ಯವಾಗದಿರುವಾಗ ಇನ್ನು ನಿಮ್ಮ ವಿದ್ಯಾರ್ಥಿಗಳಿಗೆ ವಿಷಯಗಳನ್ನು ಹೇಗೆ ತಿಳಿಯಪಡಿಸುತ್ತೀರ?' ನಾನು ಅವರ ಮಾತುಗಳನ್ನು ತಮಾಷೆಯಲ್ಲಿ ತೆಗೆದುಕೊಳ್ಳುತ್ತಿದ್ದೆ. ಇದು ಅವರ ಮತ್ತು ಅವರ ಹೆಂಡತಿಯ ವಿಷಯವಾಗಿದ್ದು, ಇದರಿಂದ ನನಗೇನಾಗಬೇಕಿತ್ತು?

ದಿನಗಳು ರೆಕ್ಕೆ ಕಟ್ಟಿಕೊಂಡು ಹಾರುತ್ತಿದ್ದವು. ರಿತಿಕ್ ಮತ್ತು ನಾನು ಬೇರೆಯಾದ ಪ್ರಸಂಗ ಹಿಂದಕ್ಕೆ ಹೋಗುತ್ತಿತ್ತು. ಋಷಭ್ ಮತ್ತು ನನ್ನ ಪ್ರೀತಿಯ ಸಂಬಂಧ ಸಾಮಾನ್ಯ ಗತಿಯಲ್ಲಿ ಉಚಿತವಾಗಿಯೇ ಸಾಗುತ್ತಿತ್ತು; ಆಗಲೇ ಅದೊಂದು ದಿನ ಋಷಭ್ ವ್ಯಗ್ರರಾಗಿ ನನ್ನೆದುರು ಬಂದು ಕೂತರು.

'ಸುಗಂಧಾ, ಒಂದ್ ವಿಷಯ ಹೇಳ್ಲಾ?' ಋಷಭ ಗಂಭೀರವಾಗಿ ಹೇಳಿದ್ದರು.

'ಹೂಂ, ಹೇಳಿ'

'ನಾನು ನಿಮ್ಮನ್ನು ಮದುವೆಯಾಗಲು ಬಯಸುತ್ತೇನೆ', ಇದನ್ನು ಕೇಳಿ ನನಗೆ ಆಶ್ಚರ್ಯವಾಗಲಿಲ್ಲ.

'ಹಾಗೆಯೇ ಇರುವಲ್ಲಿ ನಿಮಗೇನು ಚಿಂತೆ?' ಕೇಳಿದೆ.

'ನಾನು ವಿವಾಹಿತ ಅನ್ನೋದು ನಿಮಗೆ ಗೊತ್ತಿದೆ' ಋಷಭ ನೆನಪಿಸಿದರು.

'ಹೌದು, ಗೊತ್ತಿದೆ. ನೀವೇ ಹೇಳಿದ್ದಿರಿ!'

'ಈಗ ನಾನೇನು ಮಾಡ್ಲಿ ಅಂತ ನನಗೆ ಅರ್ಥವಾಗ್ತಿಲ್ಲ'.

'ಇದರಲ್ಲಿ ಅರ್ಥ ಮಾಡಿಕೊಳ್ಳೋದು ಏನಿದೆ?'

'ಇನ್ನು ನಾವು ದಿನಾ ಭೇಟಿಯಾಗಲು ಸಾಧ್ಯವಿಲ್ಲ'.

'ಸರಿ, ಬಹುಶಃ ಇಷ್ಟೇ ದಿನ ಇರಬೇಕೆಂದು ನಮ್ಮ ಹಣೆಯಲ್ಲಿ ಬರೆದಿತ್ತು', ನಾನು ಸಹಜವಾಗಿ ಹೇಳಿದೆ.

'ನಿಮಗೆ ನನ್ನ ಕೊರತೆ ಕಾಡಿಸುವುದಿಲ್ಲವೇ?' ಅವರು ಆಶ್ಚರ್ಯದಿಂದ ಕೇಳಿದರು.

'ಏಕೆ ಕಾಡಿಸುವುದಿಲ್ಲ? ಕಾಡಿಸುತ್ತೆ. ಆದ್ರೆ ನೀವು ನಿಮ್ಮ ಮಕ್ಕಳು ಹೆಂಡ್ತಿಯ ಬಳಿಗೆ ಹೋಗುತ್ತಿದ್ದೀರಲ್ಲ! ನನಗಾಗಿ ನೀವು ಅವರನ್ನು ಬಿಡಲಾರಿರಿ, ಅಲ್ವಾ?' ಕೇಳಿದೆ.

'ಅದಕ್ಕೇ ಕೇಳ್ತಿದ್ದೇನೆ, ನೀವೇ ಹೇಳಿ, ಈಗ ನಾನೇನು ಮಾಡ್ಲಿ? ನಾನು ಭಾವುಕ ಮನುಷ್ಯ. ನಿಮ್ಮಿಂದ ದೂರವಿದ್ದರೆ, ನಾನು ದುರ್ಬಲನಾಗ್ತೀನಿ. ಈಗ ನೀವೇ ನನ್ನನ್ನು ಉಳಿಸಬಲ್ಲಿರಿ'.

'ನಾನು ಹೇಗೆ ನಿಮ್ಮನ್ನು ಉಳಿಸಬಲ್ಲೆ?'

'ನೀವು ಛಿಂದವಾಡಾಕ್ಕೆ ಟ್ರಾನ್ಸ್‌ಫರ್ ಮಾಡಿಸಿಕೊಳ್ಳಿ'

'ನೀವೇ ಏಕೆ ಸಾಗರಕ್ಕೆ ಬರಬಾರದು?'

'ಇಲ್ಲ, ಬರಲಾರೆ, ನೀವು ನನ್ನ ಅಸಹಾಯಕತೆಯನ್ನು ಅರ್ಥ ಮಾಡಿಕೊಳ್ಳಿ'

'ನೀವು ಪುರುಷರಾಗಿ ಅಸಹಾಯಕರು ಎಂದು ರೋದಿಸುತ್ತಿದ್ದೀರ? ನಾನು ಛಿಂದವಾಡಕ್ಕೆ ಬರಲಾರೆ', ನಾನು ಸಹ ನನ್ನ ನಿರ್ಣಯವನ್ನು ತಿಳಿಸಿದೆ.

'ಅಂದ್ರೆ ನಾವು ಬೇರೆಯಾಗ್ತಿದ್ದೇವೆ?' ಋಷಭ್ ಕೇಳಿದರು.

'ಹೌದು, ಹೀಗೇ ತಿಳೀರಿ!' ನಾನು ಶಾಂತಳಾಗಿ ಹೇಳಿದೆ. ಪುರುಷನೊಬ್ಬ ನನ್ನೆದುರು ತನ್ನ ಭಾವುಕತೆ ಅಥವಾ ಅಸಹಾಯಕತೆಗೆ ರೋದಿಸಿದಾಗ ನನಗೆ ಅವನ ಬಗ್ಗೆ ತುಂಬಾ ಸಿಟ್ಟು ಬರುತ್ತಿತ್ತು.

'ನಿಮ್ಮ ಮನೆಯವರು ನನ್ನನ್ನು ಒಪ್ಪಿಕೊಳ್ಳಲ್ಲ, ಇದನ್ನೆಲ್ಲಾ ಮರೆತು ಬಿಡಿ. ನಾವು ಜೊತೆಗಿದ್ದಷ್ಟು ದಿನ ಸಂತೋಷವಾಗಿದ್ದೆವು, ನನಗಿಷ್ಟೇ ಸಾಕು. ನೀವು ನಿಮ್ಮ ಪರಿವಾರಕ್ಕೆ ಮರಳಿ ಹೋಗಿ ಬೇಗನೇ ನನ್ನನ್ನು ಮರೆಯುತ್ತೀರ ಎಂಬುದು ನನಗೆ ಗೊತ್ತಿದೆ', ನಾನು ಋಷಭರಿಗೆ ತಿಳಿಯಪಡಿಸಿದೆ.

'ಇದು ಅಸಾಧ್ಯ! ನಾನೆಂದೂ ನಿಮ್ಮನ್ನು ಮರೆಯಲಾರೆ' ಎಂದರು ಋಷಭ್.

ಸಂಬಂಧಗಳಲ್ಲಿ 'ಅನುಕೂಲಕರ ನ್ಯೂನತೆಯ ನಿಯಮ' ಅನ್ವಯಿಸುತ್ತದೆ. ತೃಪ್ತಿಯ ಪುನರಾವೃತ್ತಿಯ ನಂತರ ಪ್ರೀತಿಪ್ರೇಮ, ಉತ್ಸಾಹ ಮತ್ತು ಇನ್ನಿತರ ಕಾಮ ಭಾವನೆಗಳು ವ್ಯರ್ಥವೆನಿಸುತ್ತವೆ.

ಹೊಟ್ಟೆ ತುಂಬಿದ ನಂತರ ತಟ್ಟೆಯಲ್ಲಿ ಉಳಿದ ಅನ್ನ ಉಪಯೋಗಕ್ಕೆ ಬರುವುದಿಲ್ಲ; ಅಂತೆಯೇ ನಿತ್ಯ ಎದುರಿಗಿರುವ ಸಂಗಾತಿ ಸಹ ಬೇಸರವೆಂದು ತೋರುತ್ತಾನೆ. ಪುರುಷ ಈ ಬೇಸರಕ್ಕೆ ಸುಲಭವಾಗಿ ವಿಕಲ್ಪವನ್ನು ಹುಡುಕಿಕೊಳ್ಳುತ್ತಾನೆ, ಆದರೆ ಮಹಿಳೆಯರು ತಮ್ಮ ಗೆಳತಿಯರೊಂದಿಗೆ ಮಾತುಕತೆ ನಡೆಸಿ, ಶಾಪಿಂಗ್ ಮಾಡಿ ಅಥವಾ ಟೀವಿ ಧಾರಾವಾಹಿಗಳನ್ನು ವಿಕಲ್ಪವಾಗಿ ಸ್ವೀಕರಿಸುತ್ತಾಳೆ. ನನ್ನಂಥ ಮಹಿಳೆಯರು ಅಪವಾದವಾಗಬಹುದು, ಆದರೆ ಎಲ್ಲಿಯವರೆಗೆ ಅಪವಾದವಾಗುತ್ತಾರೆ?

ನನಗೆ ನನ್ನ ಮಿತಿಯ ಅರಿವಿಲ್ಲ.

'ಹೋಗುವುದಕ್ಕೆ ಮೊದಲು ಒಮ್ಮೆ ನಿಮ್ಮೊಂದಿಗೆ ಖಜುರಾಹೋಗೆ ಹೋಗಲು ಬಯಸುತ್ತೇನೆ. ಬರ್ತೀರ?' ಋಷಭ್ ಕೇಳಿದರು.'ಬರಬಲ್ಲೆ' ನಾನು ಸಹ ಅದುವರೆಗೆ ಖಜುರಾಹೋಕ್ಕೆ ಹೋಗಿರಲಿಲ್ಲ. ಕೊಟ್ಟ ಮಾತಿನಂತೆ ನಾನು ಋಷಭರೊಂದಿಗೆ ಖಜುರಾಹೋಗೆ ಹೋದೆ.

(ಸಶೇಷ)